# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರುರವರ ಕಛೇರಿ, ಕೇಂದ್ರ ಕಛೇರಿ, ಎನ್.ಆರ್. ವೃತ್ತ, ಬೆಂಗಳೂರು-560002.

ಸಂಖ್ಯೆ: ಜಂಆ(ಫ.ತ್ಯಾನಿ)/384/2021-22 ದಿನಾಂಕ: 01-06-2021

## ::ಪರಿಷ್ಕೃತ ಕಛೇರಿ ಆದೇಶ ::

**ವಿಷಯ:** ಕೋವಿಡ್-19 ರ ಸೋಂಕಿನಿಂದಾಗಿ ವಾರಸುದಾರರಿಲ್ಲದ ಮೃತಪಟ್ಟ ದೇಹಗಳ ಚಿತಾಭಸ್ಮದ ವಿಧಿ-ವಿಧಾನಗಳನ್ನು ಸರ್ಕಾರದ ವತಿಯಿಂದ ನೆರವೇರಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರರವರ ನಿರ್ದೇಶನದಂತೆ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕಿನಿಂದಾಗಿ ಮೃತಪಟ್ಟ ದೇಹಗಳ ಚಿತಾಭಸ್ಮವು ವಾರಸುದಾರರಿಲ್ಲದೇ ಚಿತಾಗಾರಗಳಲ್ಲಿಯೇ ಜಮಾವಣೆಗೊಂಡಿರುತ್ತದೆ. ಈ ಚಿತಾಭಸ್ಮವನ್ನು ಕೂಡಲೇ ಬೇರೆಡೆ ಸಾಗಿಸಿ, ಧಾರ್ಮಿಕ ಅಂತಿಮ ಕ್ರಿಯಾ ವಿಧಿ-ವಿಧಾನಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರರವರು ಈ ಕುರಿತು ಕೂಲಂಕುಷವಾಗಿ ಚರ್ಚಿಸಿ, ಯಾವುದೇ ಮೃತದೇಹಗಳ ವಾರಸುದಾರರು ಚಿತಾಭಸ್ಮವನ್ನು 15 ದಿನಗಳ ನಂತರವೂ ಕೂಡ ಪಡೆದುಕೊಳ್ಳದೇ ಇದ್ದಲ್ಲಿ, ಸದರಿ ವಾರಸುದಾರರಿಗೆ ಮೊಬೈಲ್ ಮುಖಾಂತರ ಸಂಪರ್ಕಿಸಿ ಚಿತಾಭಸ್ಮವನ್ನು ಪಡೆದುಕೊಳ್ಳಲು ಕೋರುವುದು, ಒಪ್ಪದಿದ್ದಲ್ಲಿ ಧಾರ್ಮಿಕ ಅಂತಿಮ ವಿಧಿ-ವಿಧಾನಗಳನ್ನು ಸರ್ಕಾರದ ವತಿಯಿಂದಲೇ ನೆರವೇರಿಸಲು ಸಹಮತಿಯನ್ನು ಕೋರಿ, ಅಭಿಪ್ರಾಯವನ್ನು ದಾಖಲಿಸಿಕೊಂಡು ಸರ್ಕಾರದ ವತಿಯಿಂದಲೇ ಅಂತಿಮ ವಿಧಿ-ವಿಧಾನಗಳನ್ನು ಕೈಗೊಳ್ಳಲು ನಿರ್ದೇಶಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ಎಲ್ಲಾ 12 ವಿದ್ಯುತ್ ಚಿತಾಗಾರಗಳಲ್ಲಿ ದಹನ ಮಾಡಿರುವ ಕೋವಿಡ್-19ರ ಸೋಂಕಿನಿಂದ ಮೃತಪಟ್ಟವರ ದೇಹಗಳ ಚಿತಾಭಸ್ಮವನ್ನು ಸದರಿ ಮೃತಪಟ್ಟವರ ಸಂಬಂಧಿಕರು ತೆಗೆದುಕೊಂಡು ಹೋಗದೇ ಚಿತಾಗಾರಗಳಲ್ಲಿ 15 ದಿನಗಳಿಗೂ ಮೀರಿ ಶೇಖರಿಸಿಟ್ಟಿದ್ದಲ್ಲಿ, ಅಂತಹ ಚಿತಾಭಸ್ಮವನ್ನು ತೆಗೆದುಕೊಂಡು ಹೋಗುವಂತೆ ಸಂಬಂಧಿಕರಿಗೆ ದೂರವಾಣಿ ಮುಖಾಂತರ ತಿಳಿಸುವುದು. ಕಾರಣಾಂತರಗಳಿಂದ ಸಂಬಂಧಿಕರು ಚಿತಾಭಸ್ಮವನ್ನು ತೆಗೆದುಕೊಂಡು ಹೋಗಲು ನಿರಾಕರಿಸಿದ್ದಲ್ಲಿ ಅಥವಾ ಸರ್ಕಾರದ ವತಿಯಿಂದ ವಿಧಿವಿಧಾನಗಳನ್ನು ನೆರವೇರಿಸಲು ಒಪ್ಪಿಗೆ ಸೂಚಿಸಿದರೆ, ಅಂತಹ ಚಿತಾಭಸ್ಮಗಳ ಪಟ್ಟಿಯನ್ನು ಸಿದ್ಧಪಡಿಸಿ ಧಾರ್ಮಿಕ ಅಂತಿಮ ಕ್ರಿಯಾ ವಿಧಿವಿಧಾನಗಳನ್ನು ಕೈಗೊಳ್ಳಲು ಚಿತಾಭಸ್ಮಗಳನ್ನು ಪೆಟ್ಟಿಗೆಗಳಲ್ಲಿ ಶೇಖರಿಸತಕ್ಕದ್ದು ಹಾಗೂ ವಾರಸುದಾರರಿಲ್ಲದ ಎಲ್ಲಾ ಮೃತ ದೇಹಗಳ ಚಿತಾಭಸ್ಮಗಳೊಂದಿಗೆ ಪೆಟ್ಟಿಗೆಗಳಲ್ಲಿ ತುಂಬಿಕೊಂಡು ನಿರ್ದಿಷ್ಟ ವಾಹನಗಳ ಮೂಲಕ ನಿಗದಿಪಡಿಸಲಾಗುವ ಸ್ಥಳಕ್ಕೆ ಸಾಗಿಸಿ, ಅಂತಿಮ ಕ್ರಿಯಾ ವಿಧಿ-ವಿಧಾನಗಳನ್ನು ಕೈಗೊಳ್ಳಲು ದಿನಾಂಕ: 31.05.2021ರಂದು ಹೊರಡಿಸಿರುವ ಆದೇಶವನ್ನು ಮಾರ್ಪಡಿಸಿ ಈ ಕೆಳಕಂಡ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಿದೆ.

(ಮು.ತಿ.ನೋ)

Scanned with CamScanner

1. ಪಾಲಿಕೆ ವತಿಯಿಂದ ಶ್ರೀ. ನಾಗೇಂದ್ರ ನಾಯಕ್, ಸಹಾಯಕ ಆಯುಕ್ತರು (ಶಿಕ್ಷಣ) ಹಾಗೂ ಶ್ರೀಮತಿ. ಉಮಾದೇವಿ ಬಳಿಗಾರ್, ಅಧೀಕ್ಷಕ ಅಭಿಯಂತರರು (ಎಲೆಕ್ಟ್ರಿಕಲ್) ರವರು ಸದರಿ ಪ್ರಕ್ರಿಯೆಗೆ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
2. ಸದರಿ ಧಾರ್ಮಿಕ ಅಂತಿಮ ಕ್ರಿಯಾ ವಿಧಿ-ವಿಧಾನಗಳನ್ನು ಸರ್ಕಾರದ ವತಿಯಿಂದ ನೆರವೇರಿಸಲು ಸರ್ಕಾರದ ಪರವಾಗಿ ಮಾನ್ಯ ಕಂದಾಯ ಸಚಿವರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆರವರ ನೇತೃತ್ವದಲ್ಲಿ ಕೈಗೊಳ್ಳಲು ಅನುವಾಗುವಂತೆ ನೋಡಲ್ ಅಧಿಕಾರಿಗಳು ಕ್ರಮವಹಿಸುವುದು.
3. ಸದರಿ ಧಾರ್ಮಿಕ ಕ್ರಿಯಾ ವಿಧಿ-ವಿಧಾನಗಳನ್ನು ಕೈಗೊಳ್ಳಲು ಹಾಗೂ ಚಿತಾಭಸ್ಮವನ್ನು ಸಾಗಿಸಲು ಅವಶ್ಯವಾದ ಸಾರಿಗೆ ವ್ಯವಸ್ಥೆ ಮತ್ತು ಚಿತಾಗಾರದ ಸಿಬ್ಬಂದಿಗಳನ್ನು ಬಳಸಿಕೊಳ್ಳಲು ಕ್ರಮ ಕೈಗೊಳ್ಳುವುದು.
4. ಪಾಲಿಕೆ ವತಿಯಿಂದ ನೇಮಿಸಲಾದ ನೋಡಲ್ ಅಧಿಕಾರಿಗಳು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಧಿಕಾರಿಗಳೊಂದಿಗೆ ಸಮನ್ವಯತೆಯನ್ನು ಸಾಧಿಸುವುದು ಮತ್ತು ಸರ್ಕಾರದ ವತಿಯಿಂದಲೇ ವಾರಸುದಾರರಿರುವ/ವಾರಸುದಾರರಿಲ್ಲದ ದೇಹಗಳ ಚಿತಾಭಸ್ಮದ ಅಂತಿಮ ಕ್ರಿಯಾ ವಿಧಿ-ವಿಧಾನಗಳನ್ನು ಕೈಗೊಳ್ಳಲು ಸಹಮತಿಸಿರುವ ಬಗ್ಗೆ ದಾಖಲೆಗಳೊಂದಿಗೆ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ಈ ಪ್ರಕ್ರಿಯೆಗೆ ಬೇಕಾದ ಅಗತ್ಯ ಕ್ರಮವನ್ನು ಕೈಗೊಳ್ಳುವುದು.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರಿಗೆ:**

1. ಶ್ರೀ. ನಾಗೇಂದ್ರ ನಾಯಕ್, ಸಹಾಯಕ ಆಯುಕ್ತರು (ಶಿಕ್ಷಣ) ಹಾಗೂ ಶ್ರೀಮತಿ. ಉಮಾದೇವಿ ಬಳಿಗಾರ್, ಅಧೀಕ್ಷಕ ಅಭಿಯಂತರರು (ಎಲೆಕ್ಟ್ರಿಕಲ್)ರವರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು**

1. ಮಾನ್ಯ ಆಡಳಿತಾಧಿಕಾರಿರವರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಲಾಗಿದೆ.
3. ವಿಶೇಷ ಆಯುಕ್ತರು (ಘತ್ಯಾನಿ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಸಂಬಂಧಪಟ್ಟ ವಲಯಗಳ ಜಂಟಿ ಆಯುಕ್ತರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ.
7. ಕಛೇರಿ ಪ್ರತಿ.

Scanned with CamScanner